INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,27- 31
Peer -Reviewed, Refereed Journal

# ಮೈಸೂರು ಜಿಲ್ಲೆಯ ಶಾಸನೋಕ್ತ ನಿಶಿಧಿ ಶಾಸನಗಳು

**ಅರುಣ್‌ಕುಮಾರ್ ಕೆ.ಎಸ್.**[1]

ಸನ್ಯಸನ ವಿಧಿಯಿಂದ ಮಡಿದವರ ಸ್ಮಾರಕವಾಗಿ, ವೀರರಾಗಿದ್ದರೆ ವೀರಗಲ್ಲುಗಳ ರೂಪದಲ್ಲಿ ನಿಲ್ಲಿಸುತ್ತಿದ್ದ ಸ್ಮಾರಕಶಿಲ್ಪಗಳೇ ನಿಶಿದಿಗಲ್ಲುಗಳು. ನಿಸಿಧಿಗೆ, ನಿಶೀದಿ, ನಿಷದಿ, ನಿಷಿದ್ಯಾಲಯ ಎಂಬೆಲ್ಲಾ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ. ಇವು ಬಸದಿಯ ಪ್ರತ್ಯೇಕ ಶಿಲಾಫಲಕಗಳು, ಕಂಬಗಳಲ್ಲಿ, ಊರ ಹೊರಗಿನ ಹೊಲ, ಬಂಡೆಗಳಲ್ಲಿ ಕಾಣಿಸುತ್ತವೆ. ಇವು ಸನ್ಯಸನದ ವಿಷಯ, ಸನ್ಯಾಸ ಸ್ವೀಕರಿಸಿದ ವ್ಯಕ್ತಿಯ ಚಿತ್ರ ಹಾಗೂ ಶಾಸನ ಸಹಿತವೂ, ಶಾಸನರಹಿತವೂ ಇರುತ್ತವೆ. ಇಲ್ಲಿ ಮುಕ್ಕೊಡೆಯಿರುವ ಜಿನನ, ಗುರುವಿನ ಮುಂದೆ ಸನ್ಯಸನ ವ್ರತಧಾರಿಯಾಗಿರುವ ವ್ಯಕ್ತಿಯ ಚಿತ್ರವು ಸಾಮಾನ್ಯವಾಗಿರುತ್ತದೆ. ಇದು ಸನ್ಯಾಸಿಗಳ ದೇಹ ಸುಟ್ಟ ಸ್ಥಳವಲ್ಲ ಹಾಗೂ ಸತ್ತವರ ಅವಶೇಷದ ಮೇಲಿನ ಗೋರಿಯಲ್ಲ. ಆದರೆ ಇವು ಜೈನತೀರ್ಥದಂತೆ ಪವಿತ್ರ ಪ್ರದೇಶವಾಗಿರುತ್ತಿದ್ದವು. ಇವು ವೀರಗಲ್ಲುಗಳಂತೆ ಪರೋಕ್ಷ ವಿನಯಕ್ಕಾಗಿ ನಿಲ್ಲಿಸಿರುವಂತಹವು.[೧] ಪ್ರಾಥಮಿಕವಾಗಿ ಸಮಾಧಿ ಮರಣ ಹೊಂದಿದ ವ್ಯಕ್ತಿಗಳ ನಿಸಿದಿಯು ಸ್ಮಾರಕವಾಗಿ ಚರಣ ಚಿಹ್ನೆಗಳನ್ನು ಕೊರೆಸುವುದು, ಶಾಸನಗಳನ್ನು ಬರೆಯಿಸುವುದು, ಸ್ಥಂಭವನ್ನು ನಿರ್ಮಿಸಿ ಕೆಳಭಾಗದಲ್ಲಿ ಶಾಸನವನ್ನು, ಮೇಲ್ಭಾಗದಲ್ಲಿ ಶಿಲ್ಪವನ್ನು ಕೊರೆಸುವುದು, ಸ್ತೂಪದಂತಹ ಗುಮ್ಮಟಾಕಾರದ ಸ್ಮಾರಕ ನಿರ್ಮಿಸುವುದು, ಸ್ಥಳೀಯವಾಗಿ ದೊರೆಯುವ ಕಲ್ಲುಗಳಿಂದ ಗುಡ್ಡೆ ಅಥವಾ ಗುಮ್ಮಟ ನಿರ್ಮಿಸುವುದು ಹಾಗೂ ಮಂಟಪಗಳನ್ನು ನಿರ್ಮಿಸುವುದು ನಿಶಿಧಿಗಲ್ಲು ಅಥವಾ ನಿಶಿಧಿಗಲ್ಲುಗಳ ವಿಭಿನ್ನ ಪ್ರಕಾರಗಳಾಗಿವೆ ಎಂದು ಡಾ. ಎಂ.ಜಿ. ಮಂಜುನಾಥ ಅವರು ನಿಶಿಧಿಗಳ ಅಧ್ಯಯನದಿಂದ ಸ್ತುತಪಡಿಸಿದ್ದಾರೆ.[೨] ಸಾಲಿಗ್ರಾಮದಲ್ಲಿ ಚರಣ ಚಿಹ್ನೆಯನ್ನು ಹೊಂದಿದ ನಿಶಿಧಿ ಹಾಗೂ ಕೃಷ್ಣರಾಜನಗರದ ಚಿಕ್ಕ ಹನಸೋಗೆಯ ತ್ರಿಕೂಟ ಬಸದಿಯಲ್ಲಿ ನೇಮಿಚಂದ್ರಾರ್ಯರ ನಿಶಿಧಿ ಶಾಸನವು ಕ್ರಿ.ಶ. ೧೦ನೇ ಶತಮಾನದ ಶಾಸನ ಸಹಿತ ನಿಶಿಧಿಯಾಗಿದೆ.[೩]

ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನಲ್ಲಿ ದೊರೆಯುವ ಮೊದಲ ನಿಶಿದಿಯು ಕ್ರಿ.ಶ. ೬ನೇ ಶತಮಾನದ ಸೋಸಲೆ ಗ್ರಾಮದಲ್ಲಿ ದೊರೆತಿದ್ದು, ಸೋಸಲೆ ಗ್ರಾಮವು ಜೈನತೀರ್ಥವಾಗಿತ್ತೆಂದು ಈ

[1] **ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.**

ನಿಸಿಧಿಗಲ್ಲನ್ನು ಆಧರಿಸಿ ದೇವರಕೊಂಡಾರೆಡ್ಡಿಯವರು ಗುರುತಿಸುತ್ತಾರೆ.[೪] ಜೈನಮುನಿಗಳ ಬಗ್ಗೆ ಹೇಳುವಾಗ ಅವರ ಸಂಘ, ಗಣ, ಗಚ್ಛ, ಅನ್ವಯಗಳನ್ನು ಹೇಳುವ ಸಂಪ್ರದಾಯವಿದೆ. ಸಂಘಗಳು ಪ್ರಧಾನವಾಗಿ ಉಳಿದವು ಅದರ ಶಾಖೆಗಳು ಮತ್ತು ಒಳಶಾಖೆಗಳಾಗಿರಬಹುದೆಂದು ವಿದ್ವಾಂಸರು ಗುರುತಿಸುತ್ತಾರೆ. ಅಂತಹ ಕೆಲವು ಶಾಸನಗಳು ಜಿಲ್ಲೆಯಲ್ಲಿ ದೊರೆಯುತ್ತವೆ. ತಿ. ನರಸೀಪುರ ತಾಲ್ಲೂಕಿನ ಚಿದರವಳ್ಳಿ ಗ್ರಾಮದ ಶಾಸನವು ದೇಶೀಕಗಣ ಕೊಂಡಕುಂದಾನ್ವಯ ನಂದಿದೇವರ ಶಿಷ್ಯೆಯಾದ ನಾಗಿಯಬ್ಬೆಕಂತಿಯ ಸಾವಿನ ಬಗ್ಗೆ ಮಗ ಕರಿಯಮನವರು ಹೊರಡಿಸಿದ ನಿಸಿದಿ ಶಾಸನವಾಗಿದೆ.[೫] ಪ್ರಸ್ತುತ ಈ ಶಾಸನಗಳಲ್ಲಿ ಕಂತಿಯರ ಬಗ್ಗೆ ಉಲ್ಲೇಖವಿದ್ದು, ಜೈನ ಸನ್ಯಾಸಿಗಳಾದ ನಿರ್ಗ್ರಂಥರು, ಸವಣರಂತೆ ಸನ್ಯಾಸಿಯರನ್ನು ಕಂತಿಯರು, ಅಜ್ಜಿಯರು ಎಂದು ಕರೆಯಲಾಗುತ್ತಿತ್ತು. ಇವರಿಗೂ ಶಿಷ್ಯ ಶಿಷ್ಯೆಯರಿದ್ದಾರೆ.[೬] ಅಂತೆಯೇ ಮುಡಿಪು ಎಂಬುದು ಆಹಾರವನ್ನು ತ್ಯಜಿಸಿ, ಮೋಹದಿಂದ ಬಿಡಿಸಿಕೊಳ್ಳುವ ಮತ್ತು ಮಡಿಯುವ ಎಂಬರ್ಥಗಳಿವೆ. ಮುಡಿಪ್ಪು ಎಂಬ ಪದಕ್ಕೆ ವ್ರತವನ್ನು ಮುಗಿಸು ಹಾಗೂ ಮರಣಹೊಂದು ಎಂದು ಸಹ ಅರ್ಥೈಸಬಹುದು. ಅಂದರೆ ಇದು ಸಮಾಧಿಮರಣದಿಂದಾಗಿರಬಹುದು, ಯುದ್ಧದಿಂದಾಗಿರಬಹುದು, ಇತರ ಸಹಜ ಸಾವು ಸಹ ಜೈನಧರ್ಮೀಯರಲ್ಲಿ ಸಂಭವಿಸುವುದನ್ನು ಮುಡಿಪು ಎಂದೆನ್ನಲಾಗುತ್ತದೆ.[೭]

ಮೈಸೂರು ತಾಲ್ಲೂಕಿನ ಬೆಲವತ್ತೆಗ್ರಾಮದ ಕ್ರಿ.ಶ. ೮ನೇ ಶತಮಾನದ ಗಂಗರ ಶ್ರೀಪುರುಷರ ಕಾಲದ ನಿಶಿದಿ ಮಹಾಪ್ರಭು ಗೋಪಯ್ಯ ಮುಡುಪಿದ ಸಮಾಧಿಯಾಗಿದ್ದು, ಕಲ್ನಾಡು ಸಹಿತ ಭೂದತ್ತಿಯ ಉಲ್ಲೇಖವಿದೆ.[೮] ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕಹನಸೋಗೆ ಗ್ರಾಮದ ಕ್ರಿ.ಶ. ೧೦ನೇ ಶತಮಾನದ ನಿಶಿಧಿಯು ಕಲ್ನೆಲೆಯ ದೇವ ಎಂಬುವವರು ತಮ್ಮ ಗುರುಗಳಾದ ಏಳಾಚಾರ್ಯ ಮುನಿಗಳ ಸಮಾಧಿ ಮರಣವನ್ನು ಗುರುವರ್ಯರ ನೆನಪಿಗಾಗಿ ಪರೋಕ್ಷ ವಿನಯವಾಗಿ ಶಿಲಾಸ್ಮಾರಕವನ್ನು ಸ್ಥಾಪಿಸಿದರು ಹಾಗೂ ಈ ಶಾಸನವನ್ನು ಬೆಳ್ದೇವ ಎಂಬುವವರು ಬರೆದರು ಮತ್ತು ಮಲ್ಲಾಚಾರಿಯು ಕೆತ್ತನೆ ಮಾಡಿದ್ದಾರೆ.[೯] ಸಮಾಧಿಮರಣ ಅಥವಾ ಸಲ್ಲೇಖನ ವ್ರತವು ಪ್ರಾಚೀನ ಕರ್ನಾಟಕದಲ್ಲಿ ಜೈನರು ಬಹುವಾಗಿ ಆಚರಿಸುತ್ತಿದ್ದ ಆದರ್ಶ ಮರಣವಾಗಿತ್ತು. ಹಿಂದುಗಳಲ್ಲಿ ಈ ಆಚರಣೆಯಿದ್ದರು, ಜೈನಧರ್ಮದ ಒಂದು ಅಂಗವಾಗಿತ್ತು. ಇದನ್ನು ಪಂಡಿತಮರಣವೆಂದು ಕರೆಯುವುದು ರೂಢಿ.[೧೦]

ಇದೇ ತಾಲ್ಲೂಕಿನ ಕ್ರಿ.ಶ. ೧೦ನೇ ಶತಮಾನದ ಶಾಸನವು ಚಿಕ್ಕಹನಸೋಗೆ ಗ್ರಾಮದ ಸಂಸ್ಕೃತ ಶಾಸನವಾಗಿದ್ದು, ಶ್ರೀಧರದೇವರ ಶಿಷ್ಯ, ಕೊಂಡಕುಂದನ್ವಯನ ದೇಶಿಕ ಗಣ ಪುಸ್ತಕಗಚ್ಛದಲ್ಲಿನ ಜೈನಧರ್ಮಗುರು ನೇಮಿಚಂದ್ರಾಚಾರ್ಯರು ಎರಡೂವರೆ ತಿಂಗಳು ಸಲ್ಲೇಖನವ್ರತ ಕೈಗೊಂಡು ಮುಡಿಪಿದರೆಂದು ಸಂಸ್ಕೃತ ನಿಶಿಧಿ ಶಾಸನವಾಗಿದೆ.[೧೧]

ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದ ನಿಶಿದಿಯು ದೇವನೂರು ಮಠದ ಮುಂಭಾಗದಲ್ಲಿದ್ದು, ಕನಕಸೇನ–ಪಂಡಿತನ ಶಿಷ್ಯ ಉತ್ತವಯ್ಯನು ಸನ್ಯಾಸವನ್ನು ಕೈಗೊಂಡು

ಮುಡಿಪಿದರೆಂದು ಉಲ್ಲೇಖಿಸುತ್ತದೆ.[೧೨] ಮೈಸೂರು ತಾಲ್ಲೂಕಿನ ವರಕೋಡು ಗ್ರಾಮದಲ್ಲಿ ಪಿಟ್ಟಬ್ಬೆಯ ನಿಶಿದಿಯಿದೆ.[೧೩] ಕೃಷ್ಣರಾಜನಗರ ತಾಲ್ಲೂಕಿನ ಹೆಬಸೂರು ಗ್ರಾಮದಲ್ಲಿ ಭಂಡಾರದ ಬಾದವಯ್ಯನ ಮಗಳು ದೇಯಿಬ್ಬೆಯ ನಿಶಿದಿಯಾಗಿದೆ.[೧೪] ತಿ. ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದ ಸಿವಲಯ್ಯನ ಬಸದಿಯ ತೊಯ್ವಬ್ಬೆಯ ಹಿರಿಯ ಶಿಷ್ಯಳಾದ ಅಮಿಬ್ಬೆಕಂತಿಯು ನೋನ್ತು ಮುಡಿಪಿದಾಗ ಅವಳ ಸ್ಮರಣೆಗಾಗಿ ಅಯ್ವಬ್ಬೆಕಂತಿಯರು ಕಲ್ಲನಿರಿಸಿದರೆಂದು ಉಲ್ಲೇಖಿಸುತ್ತದೆ.[೧೫] ಕ್ರಿ.ಶ. ೧೦೧೩ರ ಹುಣಸೂರು ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ಮಾಕಬ್ಬೆಗಂತಿ ಮಡಿದದ್ದಕ್ಕೆ ಬೀಚಗವುಡರು ಪರೋಕ್ಷ ವಿನಯದಿಂದ ನಿಶಿಧಿ ಕಲ್ಲನಿರಿಸಿದರೆಂದು ಉಲ್ಲೇಖಿಸುತ್ತದೆ.[೧೬] ಹೀಗೆ ಮೈಸೂರು ಜಿಲ್ಲೆಯಲ್ಲಿ ಕಂತಿಯರ ಹಲವು ನಿಶಿಧಿಗಳಿದ್ದವು. ಅಲ್ಲದೇ ಕಂತಿಯರಿಗೂ ಮಠಗಳು ಹಾಗೂ ಶಿಷ್ಯಶಿಷ್ಯೆಯರೂ ಸಹ ಇದ್ದರು.

ನಂಜನಗೂಡಿನ ತಾಲ್ಲೂಕಿನ ಹರತಲೆಗ್ರಾಮದ ಶಾಸನವು ಕಾರೆನಾಡು–೭೦ರ ಪಿರಿಯ ಪೆರ್ಮ್ಮಾಡಿ ಗಾವುಂಡನ ಮಗ ಪೆರ್ಮಾಡಿಗಾವುಂಡನು ಸಮಾಧಿ ಮರಣ ಹೊಂದಿದ್ದನ್ನು ತಾಯಿ ಆಯ್ವಬ್ಬೆ ನಿಶಿಧಿಗಲ್ಲನಿರಿಸಿದಳೆಂದು ಉಲ್ಲೇಖಿಸುತ್ತದೆ.[೧೭] ಇದೇ ಗ್ರಾಮದ ಪೆರ್ಮನಾಡಿ ನಿಶಿಧಿಯನ್ನು ಅವನ ತಾಯಿ ನಿಲಿಸಿದಳೆಂದು ಮಾರಿಚಾವಾಡಿಯ ದಕ್ಷಿಣ ಜಗತಿಕಟ್ಟೆಯ ಬಳಿ ಇರುವ ಶಾಸನವು ಉಲ್ಲೇಖಿಸುತ್ತದೆ.[೧೮] ಮೈಸೂರು ತಾಲ್ಲೂಕಿನ ವರಕೋಡು ಗ್ರಾಮದ ವರದರಾಜ ದೇವಾಲಯದ ಮುಖಮಂಟಪದ ದಕ್ಷಿಣ ಕಡೆ ಕಂಬದಲ್ಲಿ ಬೀಕೀತಮ್ಮನ ಆನಂತನು ನೋಂಪಿದನೆಂದು ಉಲ್ಲೇಖಿಸುತ್ತದೆ.[೧೯]

ಕ್ರಿ.ಶ. ೧೨ನೇ ಶತಮಾನದ ಕೃಷ್ಣರಾಜನಗರ ತಾಲ್ಲೂಕಿನ ಸಾಲಿಗ್ರಾಮದ ನಿಶಿಧಿಯು, ಮೂಲಸಂಘದ, ಬಲಾತ್ಕಾರಗಣದ ಮಾಘಣಂದಿ ಸಿದ್ಧಾಂತ ಚಕ್ರವರ್ತಿಗಳ ಪ್ರೀತಿಯ ಶಿಷ್ಯ (ಗುಡ್ಡ) ಸಂಬುದೇವನ ಹೆಂಡತಿ (ಮದವಳಿಗೆ) ಬೊಂಮ್ಮಮ್ಮೆ ಮತ್ತು ಚತುರ್ವಿಂಶ ತೀರ್ಥಂಕರರು ಪ್ರತಿಜ್ಞೆ ಕೈಗೊಂಡು ನೋಂಪಿ ಮಡಿದ ಚಿತ್ರದ ಪ್ರಸ್ತುತಿ ಸಹಿತ ನಿಶದಿಯಾಗಿದೆ.[೨೦] ಪ್ರಸ್ತುತ ಶಾಸನವು ಸಾಲಿಗ್ರಾಮದ ಅನಂತನಾಥಸ್ವಾಮಿ ಬಸದಿಯ ಚತುರ್ವಿಂಶತಿ ತೀರ್ಥಂಕರರ ನೀಲಶಿಲಾಪ್ರತಿಮೆಯ ಪ್ರಭಾವಳಿಯ ಹಿಂದಿದ್ದು, ಪ್ರಮುಖ ಜೈನತೀರ್ಥವಾಗಿ ಸಾಲಿಗ್ರಾಮವು ಪ್ರಸಿದ್ಧವಾಗಿತ್ತು. ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ನಿಶಿದಿಯು, ಜಿನ ಮತ್ತು ಪೆರುಮಾಳ ದೇವರಸರ ಜಿನಸ್ತೋತ್ರದೊಂದಿಗೆ ಆರಂಭವಾಗಿದೆ. ಮಾಣಿಕ್ಯದೇವನ ಜಿನದೇವಾಲಯ, ಪರಮೇಶ್ವರನ ಚೈತ್ಯಾಲಯ ನಿರ್ಮಿಸಿ ದತ್ತಿ ನೀಡಿದ ಈ ಶಾಸನವು ಪ್ರಾಸಂಗಿಕವಾಗಿ ಪೆರುಮಾಳದೇವರ ನಿಶಿಧಿಯನ್ನು ಉಲ್ಲೇಖಿಸುತ್ತದೆ.[೨೧] ಇದೇ ತಾಲ್ಲೂಕಿನ ಏಚಿಗನಹಳ್ಳಿ ಶಾಸನವು ಮೇಘಚಂದ್ರದೇವನ ನಿಶಿಧಿಯನ್ನು ಅವರ ಶಿಷ್ಯ ಮಾಣಿಕದೇವರು ನಿರ್ಮಿಸಿದರೆಂದು ಉಲ್ಲೇಖಿಸುತ್ತದೆ. ಪ್ರಸ್ತುತ ಶಾಸನವು ಮೇಘಚಂದ್ರನನ್ನು “ಅಱಿಯದ ವಿದ್ದೆಯಿಲ್ಲಿ ವಿಡದೋದದ ಕೇಳದ ಶಾಸ್ತ್ರವಿಲ್ಲ ಕೂರ್ತ್ತಿ . . . ಭೂಪರಿಲ್ಲ ಸಲೆ ಸೋಲದವಾದಿಗಳಿಲ್ಲ ಸಂತತಂ ನೆಱೆಯ ಸಮಸ್ತರುಂ ಪೊಗಳದಿರ್ದ್ದ ಕವೀಶ್ವರುಮಿಲ್ಲ ಲೋಕದೊಳ್ಳಿಱೆಪಾರ್ಸ್ವದೇವಸ್ತುತ ಬಾಹುಬಲಿ

ಬ್ರತಿಶಕ್ತಿಯದ್ಭುತಂ" ಎಂದು ಮುಂತಾಗಿ ವರ್ಣಿಸಿದೆ.[೨೨] ಮೈಸೂರು ತಾಲ್ಲೂಕಿನ ಹಡಜನ ಗ್ರಾಮದ ಕ್ರಿ.ಶ. ೧೩೮೪ರ ಲಕ್ಷ್ಮಿಕಾಂತ ದೇವಸ್ಥಾನದ ಮುಂದಿರುವ ನಿಶಿಧಿಯು, ಸೈದ್ಧಾಂತಿದೇವನ ಶಿಷ್ಯೆ (ಪ್ರಿಯಗುಡ್ಡಿ) ಮಾರದೇವಿಯರ ಅಕ್ಕ ಕೇಶವದೇವಿಯರು ಸ್ವರ್ಗಸ್ಥರಾದರೆಂಬ ನಿಸಿದಿ ಶಾಸನವಾಗಿದೆ. ಈ ನಿಶಿದಿಯು ಬಸದಿಯ ಅರ್ಚನೆಗೆ ನೀಡಿದ ೧೦ ಖಂಡುಗ ಭೂಮಿಯ ಎಲ್ಲೆಗಳೊಂದಿಗೆ ಉಲ್ಲೇಖಿಸುವ ಮೈಸೂನಾಡ ಹಡಜನದ ತಂದೆಯರ ಕುಲದ ಬಮ್ಮಯ್ಯರ ಮಗ ಹಿರಿಯ ಮಾದಣ್ಣನವರು ಬಿಟ್ಟ ದತ್ತಿಯಾಗಿದೆ ಎಂದು ಉಲ್ಲೇಖಿಸುತ್ತದೆ.[೨೩] ಕ್ರಿ.ಶ. ೧೬೧೧–೧೨ರ ಮೈಸೂರು ತಾಲ್ಲೂಕಿನ ವರಕೋಡು ಗ್ರಾಮದ ವರದರಾಜ ದೇವಾಲಯದ ಮುಖಮಂಟಪದ ದಕ್ಷಿಣದ ಕಡೆಯ ಕಂಬದಲ್ಲಿ ಬೀಕೀತಮ್ಮನ ಅನಂತನು ನೋಂಪಿದನೆಂದು ಉಲ್ಲೇಖಿಸಲಾಗಿದೆ.[೨೪] ಹೀಗೆ ಮೈಸೂರು ಜಿಲ್ಲೆಯ ಶಾಸನೋಕ್ತ ಜೈನಧರ್ಮದ ನಿಶಿಧಿ ಶಾಸನಗಳನ್ನು ವಿಶ್ಲೇಷಿಸಲಾಗಿದೆ.

**ಅಡಿಟಿಪ್ಪಣಿಗಳು**

೧. ಡಾ.ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಪು. ೧೦೭–೧೦೮.

೨. ಡಾ.ಎಂ.ಜಿ. ಮಂಜುನಾಥ : ಮಾಸ್ತಿಗಲ್ಲು, ವೀರಗಲ್ಲು ಮತ್ತು ನಿಶಿಧಿಗಲ್ಲುಗಳು ; ಪು. ೭೩.

೩. ಡಾ.ಮಂಜುಶ್ರೀ ಎಸ್.ಪಿ. :ಮೈಸೂರು ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಪು. ೪೪೫.

೪. ಡಾ. ದೇವರಕೊಂಡಾರೆಡ್ಡಿ : ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ ; ಪು. ೨೦೭, ಸೋಸಲೆಯ ನಿಸಿಧಿ ಶಾಸನ ಇತಿಹಾಸ ದರ್ಶನ ಸಂಪುಟ, ೪, ಪು. ೮.

೫. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ.5,ತಿ.ನರಸೀಪುರ, ೧೦೧, ಚಿದರವಳ್ಳಿ, ಪು. ೫೦೦,ಕ್ರಿ.ಶ. x.

೬. ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಪು. ೯೧.

೭. ಅದೇ ; ಪು. ೧೦೭.

೮. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಮೈಸೂರು, ೧೧೭, ಬೆಲವತ್ತೆ, ಪು. ೨೬೭, ಕ್ರಿ.ಶ. ೮ನೇ ಶತಮಾನ.

೯. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಕೃಷ್ಣರಾಜನಗರ, ೩೬, ಚಿಕ್ಕಹನಸೋಗೆ, ಪು. ೨೩, ಕ್ರಿ.ಶ. ೧೦ ನೇ ಶತಮಾನ.

೧೦. ಡಾ.ಎಂ.ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ; ಪು. ೧೦೦–೧೦೨.

೧೧. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಕೃಷ್ಣರಾಜನಗರ, ೩೫, ಚಿಕ್ಕಹನಸೋಗೆ, ಪು. ೨೧, ಕ್ರಿ.ಶ. ೧೦ನೇ ಶತಮಾನ.

೧೨. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 3, ನಂಜನಗೂಡು ೨೮೦ ದೇವನೂರು ಕ್ರಿ.ಶ. ೧೦ನೇ ಶತಮಾನ, ಪು. ೩೫೮.

೧೩. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಮೈಸೂರು, ೧೨೯, ವರಕೋಡು, ಪು. ೨೭೨, ಕ್ರಿ.ಶ. ೧೦ನೇ ಶತಮಾನ.

೧೪. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಕೃಷ್ಣರಾಜನಗರ ೭೪ ಹೆಬಸೂರು, ಪು. ೬೮, ಕ್ರಿ.ಶ. ೧೦ನೇ ಶತಮಾನ.

೧೫. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ತಿ. ನರಸೀಪುರ, ೨೭೦ ಮೂಗೂರು ಪು. ೬೪೯ ಕ್ರಿ.ಶ. ೧೦ನೇ ಶತಮಾನ.

೧೬. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 4, ಹುಣಸೂರು, ೪೩, ಬೊಮ್ಮಲಾಪುರ, ಪು. ೫೦೮, ಕ್ರಿ.ಶ. ೧೦೧೩.

೧೭. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 3, ನಂಜನಗೂಡು ೩೮೭ ಹರತಲೆ ಪು ೪೨೩ ಕ್ರಿ.ಶ. ೧೧ನೇ ಶತಮಾನ.

೧೮. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 3, ನಂಜನಗೂಡು ೩೮೮ ಹರತಲೆ ಪು. ೪೨೪ ಕ್ರಿ.ಶ. ೧೧ನೇ ಶತಮಾನ.

೧೯. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಮೈಸೂರು, ೧೨೫ ವರಕೋಡು ಪು. ೨೭೧ ಕ್ರಿ.ಶ. ೧೬೧೧–೧೨.

೨೦. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಕೃಷ್ಣರಾಜನಗರ ೫೯ ಸಾಲಿಗ್ರಾಮ ಪು. ೬೩, ಕ್ರಿ.ಶ. ೧೨ನೇ ಶತಮಾನ.

೨೧. ಎಫಿಗ್ರಾಫಿಯಾ ಕರ್ನಾಟಿಕ(EC)ಸಂ.3,ನಂಜನಗೂಡು.೧೩೭ ಹುಲ್ಲಹಳ್ಳಿ,ಪು.೨೬೦ ಕ್ರಿ.ಶ. ೧೩೭೧.

೨೨. ಎಫಿಗ್ರಾಫಿಯಾ ಕರ್ನಾಟಿಕ(EC)ಸಂ.3,ನಂಜನಗೂಡು,೧೭೧ಏಚಿಗನಹಳ್ಳಿ ಪು.೨೭೭ಕ್ರಿ.ಶ. ೧೩೭೧.

೨೩. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಮೈಸೂರು,೧೮೫ ಹಡಜನ ಪು. ೩೦೦ ಕ್ರಿ.ಶ. ೧೩೮೪.

೨೪. ಎಫಿಗ್ರಾಫಿಯಾ ಕರ್ನಾಟಿಕ(EC) ಸಂ. 5, ಮೈಸೂರು, ೧೨೫ ವರಕೋಡು, ಪು. ೨೭೧, ಕ್ರಿ.ಶ. ೧೬೧೧–೧೨.